ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ 2.7.16

ಪಾಟೀ ಸವಾಲುಃ ಶ್ರೀ.ಕೆಆರ್ ವಕೀಲರಿಂದಃ

ನಾನು ಈಗ ಕೃಷಿ ಕೆಲಸ ಮಾಡುತ್ತಿದ್ದೇನೆ. ಬಾರಿಸ್ಟ್ ಇನ್ಸ್ಟ್ಯೂಟ್ ಅಫ್ಟೆಕ್ನಾಜಲಿ ಕಾಲೇಜಿನಲ್ಲಿ ನಾನು ಪ್ರೊಫೆಸರ್ ಅಗಿ ಕೆಲಸ ಮಾಡುತ್ತಿದ್ದೆನು. ಅ ಕಾಲೇಜಿನಲ್ಲಿ 3 ವರ್ಷ ಕೆಲಸ ಮಾಡಿರುತ್ತೇನೆ. ನಾನು ನನ್ನ ಮನೆಯ ಸಮಕಸ್ಯೆ ಹಾಗೂ ಉನ್ನತ ಶಿಕ್ಷಣ ಸಲುವಾಗಿ ನಾನೇ ಕೆಲಸಕ್ಕೆ ರಾಜಿನಾಮೆ ಕೊಟ್ಟು ಬಂದಿರುತ್ತೇನೆ. ನಾನು ಈಗ ವಿಟುಯು ಬೆಳಗಂ ಪಿಹೆಚ್ಡಿ ಮಾಡುತ್ತಿದ್ದೇನೆ. ನಾನು ಇಂಜೀನಿಯರಿಂಗ್‌ನಲ್ಲಿ ಎಂಟೆಕ್ ಮಾಡಿರುತ್ತೇನೆ. ನಾನು ಎಂಟೆಕ್ ಮಾಡಿರುವ ಬಗ್ಗೆ ನನ್ನಬಳಿ ದಾಖಲೆ ಇರುತ್ತದೆ. ನಾನು ಎಂಟೆಕ್ ಮಾಡಿಲ್ಲ ಎಂದರೆಸ ರಿಯಲ್ಲ. ಪಿಹೆಚ್ಡಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ಈಗ ಎಷ್ಟು ದಾವೆಗಳನ್ನು ಹಾಕಿ ನಿರ್ವಹಿಸುತ್ತಿದ್ದೇನೆ ಎಂಬುದು ನನಗೆ ನೆನಪಿಲ್ಲ. ನಾನು ಈಗ್ಗೆ 2011 ರಿಂದ ನನ್ನ ತಂದೆ ತೀರಿಹೋದ ನಂತರ ನಾನೇ ದಾವೆ ನಿರ್ವಹಿಸುತ್ತಿದ್ದೇನೆ. ಅದಕ್ಕೆ ಮೊದಲು ನನನ ತಂದೆಯವರ ಜೊತೆ 1995 ಇಸವಿಯಿಂದಲೂ ದಾವೆ ಬಗ್ಗೆ ವ್ಯವಹರಿಸುತ್ತಿದ್ದೇನೆ. ಇದೇ ನ್ಯಾಯಾಲಯ ಹಾಗೂ ಬಂಟ್ವಾಳ ಹಿರಿಯಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆಗಳನ್ನು ನಿರ್ವಹಿಸುತ್ತಿದ್ದೇನೆ. ನಾನು ವಕೀಲರ ಮುಖಾಂತರ ದಾವೆ ನಿರ್ವಹಣೆ ಮಾಡುತ್ತಿದ್ದೇನೆ. ಈ ದಾವೆಯಲ್ಲಿ ವಕೀಲರ ಮುಖಾಂತರ ನಡೆಸುತ್ತಿದ್ದೇನೆ. ಇತರೆ ವಾದಿಗಳ ಪರವಾಗಿ ಸಾಕ್ಷಿ ನುಡಿಯಲು ಅಧಿಕಾರ ಪತ್ರ ಇದೆಯಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಈ ದಾವೆಯ ಜಮೀನಿನ ಬಗ್ಗೆ ನನಗೆ ಹುಟ್ಟಿನಿಂದಲೂ ಮಾಹಿತಿ ಇದೆ. ಅದರ ಗಡಿ ಎಲ್ಲಾ ನನಗೆ ಗೊತ್ತಿದೆ. ಈ ದಾವೆಯಲ್ಲಿ ಗಡಿಗಳ ಬಗ್ಗೆ ಹೇಳದ ಇರುವ ಬಗ್ಗೆ ಏನಾದರೂ ಕಾರಣ ಇದೆಯೇ ಎಂದರೆ ಸಾಕ್ಷಿ ಬಿಟ್ಟು ಹೋಗಿರಬಹುದು ಎಂದು ಹೇಳುತ್ತಾರೆ. ಈ ದಾವೆಯನ್ನು ತಯಾರು ಮಾಡಲು ಮನೆಯವರೆಲ್ಲರೂ ಮಾಹಿತಿ ಕೊಟ್ಟಿರುತ್ತೇವೆ. ಈ ದಾವೆಯಲ್ಲಿ ಗಡಿಗುರುತುಗಳನ್ನು ಕಾಣಿಸಿಲ್ಲ ಎಂಬುದರ ಬಗ್ಗೆ ನಂತರ ತಿಳಿದುಕೊಂಡಿಲ್ಲ.

ಈ ದಾವೆಯ 1 ಮತ್ತು 5ನೇ ಪ್ರತಿವಾದಿಗಳು ಸಲ್ಲಿಸಿರುವ ಪ್ರತಿವಾದ ಪತ್ರವನ್ನುಓದಿ ತಿಳಿದುಕೊಂಡಿಲ್ಲ, ಪ್ರತಿವಾದಿಗಳು ಸಲ್ಲಿಸಿದ ಪ್ರತಿವಾದಪತ್ರವನ್ನು ವಕೀಲರ ಮುಖಾಂತರ ತಿಳಿದುಕೊಳ್ಳಲು ನನಗೆ ಅಗತ್ಯ ಇರಲಿಲ್ಲ, ಪ್ರತಿವಾದಿಗಳು ಏನು ಪ್ರತಿವಾದ ಪತ್ರ ಸಲ್ಲಿಸಿದ್ದಾರೆಂದು ಸಂಪೂರ್ಣವಾಗಿ ತಿಳಿದುಕೊಂಡಿಲ್ಲ, ಏನು ತಿಳಿದುಕೊಂಡಿದ್ದೀರ ಎಂಬ ಪ್ರಶ್ನೆಗೆ ನೋಡಿದರೆ ಹೇಳುತ್ತೇನೆ ಎಂದು ಹೇಳುತ್ತಾರೆ. 1 ಮತ್ತು 5ನೇ ಪ್ರತಿವಾದಿಗಳು ದಾವೆಯ ಗಡಿಗುರುತುಗಳನ್ನು ಹಾಕಿಲ್ಲ ಎಂದು ಪ್ರತಿಪಾದನೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ, ವ್ಯಾಜ್ಯ ಜಮೀನಿಗೆ ಉತ್ತರ ದಿಕ್ಕಿಗೆ ವಿವಾದಿತ ರಸ್ತೆ ಇದೆ. ಆ ರಸ್ತೆ ಜಮೀನಿಗೆ ಒಳಗೆ ಇದೆ. ಉತ್ತರ ದಿಕ್ಕಿಗೆ ರಸ್ತೆ ಇದೆ. ಆ ಉತ್ತರ ದಿಕ್ಕಿನ ಗಡಿ ನನಗೆ ತಿಳಿದಿದೆ. ಪಶ್ಚಿಮ ದಿಕ್ಕಿಗೆ ನನ್ನ ತಂದೆ ಅಣ್ಣ ಶ್ಯಾಮರಾಯರ ಜಾಗ ಇದೆ. ಪೂರ್ವ ದಿಕ್ಕಿಗೆ ಸರ್ವೆ ನಂ.202/1ಎ2 ಕುಮುಕಿ ಜಾಗ ಇದೆ. ದಕ್ಷಿಣ ದಿಕ್ಕಿನಲ್ಲಿ ನನ್ನ ತಂದೆ ಅಣ್ಣ ಶ್ಯಾಮರಾಯರ ಜಾಗ ಇದೆ. ಜಾಗದಲ್ಲಿ 4 ದಿಕ್ಕುಗಳನ್ನು ವಿಂಗಡಿಸಿ ತೋರಿಸಲು ಕಣ್ಣಿಗೆ ಕಾಣುವ ಸರ್ವೆ ಕಲ್ಲುಗಳು ಇದೆ. ಸರ್ವೆ ಕಲ್ಲುಗಳನ್ನು ಹೊರತುಪಡಿಸಿ ತೋರಿಸಲು ಬೇಲಿ ಇದೆ. 4 ಮೂಲೆಯಲ್ಲೂ ಬೇಲಿ ಇದೆ. ಈಗಲೂ ಬೇಲಿ ಇದೆ. ವಿವಾದಿತ ರಸ್ತೆ ಕರಿಮಜಲಿನಿಂದ ಪಾಟರಕೋಡಿಗೆ ಇದೆ. ಆ ವಿವಾದಿತ ರಸ್ತೆ 2 ಕಿಮೀ ಗಿಂತ ಜಾಸ್ತಿ ಉದ್ದ ಇದೆ. ಅದು ಪುತ್ತೂರು-ಮಂಗಳೂರು ರಸ್ತೆಗೆಸೇರುತ್ತದೆ. ಆ ರಸ್ತೆ ನಾನು ಹುಟ್ಟುವಾಗಲೇ ಇತ್ತು, ಅದನ್ನು ನೋಡಿಕೊಳ್ಳುವುದು ಉಸ್ತುವಾರಿ ಮಾಡುವುದು ಪಂಚಾಯಿತ್‌ನವರಾ ಎಂರದೆ ಅದನ್ನು ಯಾರುಮಾಡುವುದಿಲ್ಲ,ಅ ರಸ್ತೆ ಮೊದಲು ಡಾಮಾರು ಆಗಿತ್ತು, ಈಗ ಅದಕ್ಕೆ ಕಾಂಕ್ರೀಟ್ ಹಾಕಿದ್ದಾರೆ ಎಂದರೆ ಸರಿ. ರಸ್ತೆಯ ಅಗಲ ಮೊದಲು 3 ಮೀ ಇತ್ತು ಈಗ 8 ಮೀಟರ್ ಅಗಲ ಇದೆ. ಅ ರಸ್ತೆ ಯಾವ ಯಾವ ಸರ್ವೆ ನಂಬರ್‌ಗಳಿಂದ ಹಾದು ಹೋಗುತ್ತದೆ ಎಂದು ನನ್ನಿಂದಹೇಳಲು ಸಾಧ್ಯವಿಲ್ಲ, ದಾವಾ ಶೆಡ್ಯೂಲ್ ಜಾಗದಿಂದ, ಯಾರ ಪಕ್ಕದ ಜಮೀನಿಂದ ರಸ್ತೆ ಹಾದುಹೋಗುತ್ತದೆ ಎಂದು ಗೊತ್ತಿಲ್ಲ, ನಂತರ ಸರ್ಕಾರಿ ಜಾಗದಿಂದ ಹೋಗುತ್ತದೆ. ಅ ಸರ್ಕಾರಿ ಜಾಗ ಯಾವ ಸರ್ವೆ ನಂಬರ್‌ನಲ್ಲಿದೆ ಎಂದು ಗೊತ್ತಿಲ್ಲ, ಈ ವ್ಯಾಜ್ಯಹೂಡುವ ಮೊದಲು ಸರ್ವೆಯರ್‌ನಿಂದ ಅಳತೆಮಾಡಿಸಿರುತ್ತೇನೆ.ನಕ್ಷೆ ಇದೆ. ಹಾಜರುಮಾಡಿರುತ್ತೇನೆ. ದಾವಾ ರಸ್ತೆಯಎಫ್‌ಎಂಬಿ ಸ್ಕೆಚ್ ನಾನುನೋಡಿಲ್ಲ, ಅಳತೆಮಾಡುವಾಗ ಪಕ್ಕದ ಜಮೀನುಗಳು ಯಾರದ್ದು

ಎಂದು ತಿಳಿದುಕೊಂಡಿದ್ದೀರಾ ಎಂದರೆ ಅದು ಅಗತ್ಯ ಇಲ್ಲಎಂದು ಸಾಕ್ಷಿ ಸ್ವತಃ ಹೇಳುತ್ತಾರೆ. ದಾವಾ ಸೊತ್ತುಗಳನ್ನು ಅಳತೆಮಾಡಿಸಿಲ್ಲ ಎಂದರೆ ಸರಿಯಲ್ಲ. ಅದ ಕಾರಣ ಪಕ್ಕದ ಜಾಗದವರು ಯಾರು ಎಂದು ತಿಳಿದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ನಕ್ಷೆ ತೋರಿಸಲಾಗಿ ಇದರಲ್ಲಿ ದಾವಾ ಅಸ್ತಿ ಯಾವುದು ಎಂದು ಹೇಳಬಹುದಾ  ಎಂದರೆ ಸಾಕ್ಷಿ 200/4 ಮತ್ತು 5 ದಾವಾ ಅಸ್ತಿ ಎಂದು ಗುರ್ತಿಸಿರುತ್ತಾರೆ. ಸಾಕ್ಷಿ ನೋಡಿ ಒಪ್ಪಿದ ದಾಖಲೆಯನ್ನು **ನಿಡಿ-1** ಎಂದು ಗುರ್ತಿಸಲ್ಯಾತು. 200/1 ರಿಂದ ರಸ್ತೆ ಹಾದು ಹೋಗುತ್ತದೆ ಎಂದು ನಕ್ಷೆಯಲ್ಲಿ ತೋರಿಸಲಾಗಿದೆ ಎಂದರೆ ಸಾಕ್ಷಿ ನೋಡಿ ನನಗೆ ಅದು ಅಗತ್ಯ ಇಲ್ಲ ಎಂದು ಹೇಳುತ್ತಾರೆ. ಈ ವ್ಯಾಜ್ಯದಲ್ಲಿ ಹಾಜರುಪಡಿಸಿರುವ ನಿಪಿ-1 ಮತ್ತು 2 ದಾಖಲಾತಿಗಳಿಗೂ ಪ್ರತಿವಾದಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಈಗ ಹೇಳಾಗುವುದಿಲ್ಲ ಎಂದು ಹೇಳುತ್ತಾರೆ. ನಿಪಿ-1 ಮತ್ತು 2 ನನ್ನ ಸ್ವಾಧೀನದಲ್ಲಿರುವ ಜಮೀನಿನ ಪಟ್ಟಕ್ಕೆ ಸಂಬಂಧಪಟ್ಟ ದಾಖಲೆಗಳು. ನಿಪಿ-1 ಮತ್ತು 2ರಲ್ಲಿ ಇರುವ ನಮೂದುಗಳು ಪ್ರತಿವಾದಿಗಳಿಗೆ ಅನ್ವಯಿಸುವುದಿಲ್ಲ ಎಂದರೆ ಅದನ್ನು ನಾನು ಹೇಳಾಗುವುದಿಲ್ಲ ಎಂದು ಹೇಳುತ್ತಾರೆ. ನಿಪಿ-1 ಮತ್ತು 2 ವಿವಾದಿತ ಜಮೀನಿಗೆ ಸಂಬಂಧಪಟ್ಟ ದಾಖಲೆಗಳು. ನಿಪಿ-3 ಮತ್ತು 4ನ್ನು ವ್ಯಾಜ್ಯ ಪೂರ್ವ  ಒಎಸ್ 190:95 ದಾವೆಯಲ್ಲಿ ಹಾಜರುಪಡಿಸಿದ್ದು ಅದರ ದೃಡೀಕೃತ ನಕಲುಗಳನ್ನು ತೆಗೆದುಕೊಂಡಿದ್ದು ಅಗಿರುತ್ತದೆ. ಅದರ ನಂತರ ನಾನು ನಿಪಿ-3 ಮತ್ತು 4ರ ಅರ್‌ಟಿಸಿಗಳನ್ನು ಪಡೆದುಕೊಂಡಿರುತ್ತೇನೆ. ಈ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಅದು ನಿಪಿ-14. ನಿಪಿ-14 ರಲ್ಲಿ ಈಗ ನಮ್ಮ ಹೆಸರು ಕಾಣಿಸುತ್ತಿಲ್ಲ. ನಿಪಿ-2 ಮತ್ತು 3 ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ಅದರಲ್ಲಿ ಕಾಣಿಸುವ ನಮೂದುಗಳನ್ನು ಯಾವುದೇ ದಾಖಲೆ ಇಲ್ಲದೆ ನಾವೇ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-9 ಎಡಿಎಲ್‌ಅರ್ ರವರು ನೀಡಿರುವ ಸರ್ವೆ ನಕ್ಷೆ. ಅದನ್ನು ಪಡೆದುಕೊಳ್ಳಲು ನಾನು ಅರ್ಜಿ ಹಾಕಿರುತ್ತೇನೆ. ನಿಪಿ-9 ಸ್ಥಳಕ್ಕೆ ಬಾರದೇ ತಯಾರಿಸಿರುವ ದಾಖಲೆ ಎಂದರೆ ಸರಿಯಲ್ಲ. ನಿಪಿ-9 ತಯಾರಿಸಲು ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ನಿಪಿ-9ನ್ನು ಪಡೆದುಕೊಳ್ಳಲು ವಾಸುಮಡಿವಾಳ ಎಂಬುವವರು ತಕರಾರು ಮಾಡಿದ ಕಾರಣ ಪಡೆದುಕೊಂಡಿರುತ್ತೇನೆ. ಈದಾವೆಯಲ್ಲಿ ವಾಸುಮಡಿವಾಳ ರವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ವಾಸು ಮಡಿವಾಳರವರಿಗೆ ಸರ್ವೆ ಸನ.202/2ಎ2ರಲ್ಲಿ ಬಾಡಿಗೆದಾರರಾಗಿ ನಾವೇ

**ಕೊಟ್ಟಿದ್ದೆವು. ಈಗ ಜಾಗವನ್ನು ಬಿಟ್ಟುಕೊಡುವಂತೆ ನ್ಯಾಯಾಲಯದ ಆದೇಶ ಆಗಿರುತ್ತದೆ.** ನಿಪಿ-9ನ್ನು **ಚಿನ್ನಪ್ಪ ಗೌಡ ಎಂಬ ಸರ್ವೆಯರ್ ಮಾಡಿರುತ್ತಾರೆ.** ನಿಪಿ-9 **ಸ್ಥಳದ ಮಾಹಿತಿಯನ್ನು ಸರಿಯಾಗಿ ಬಿಂಬಿಸುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ದಾಖಲೆ ಎಂದರೆ ಸರಿಯಲ್ಲ.**

**ಈ ಹಂತದಲ್ಲಿ ಕೆಆರ್ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕಾಶ ನೀಡಲಾಯಿತು.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಬಂಟ್ವಾಳ, ದ.ಕ.**